ಕರ್ನಾಟಕ ಸರ್ಕಾರ

## ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಮಲ್ಲೇಶ್ವರಂ, ಬೆಂಗಳೂರು-3.

ಸಂಖ್ಯೆ:ಎಸ್1/ವಾ.ಪ.ಅ/ಜನವರಿ-2023/12/2022-23 ದಿನಾಂಕ: 09/12/2022

-: **ಅಧಿಸೂಚನೆ** :-

**ವಿಷಯ:** 2023ರ ಜನವರಿ ಮಾಹೆಯಲ್ಲಿ ನಡೆಯಲಿರುವ ವಾಣಿಜ್ಯ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

**ಉಲ್ಲೇಖ:** ಆಯುಕ್ತರು, ಸಾ.ಶಿ.ಇಲಾಖೆ ಮತ್ತು ಅಧ್ಯಕ್ಷರು, ಕ.ಪ್ರೌ.ಶಿ.ಪ.ಮಂಡಳಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 02.01.2019ರಂದು ನಡೆದ ಸಭಾ ನಡಾವಳಿ.

******

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯ ಪರೀಕ್ಷಾ ವಿಭಾಗದಿಂದ 2023ರ ಜನವರಿ ಮಾಹೆಯಲ್ಲಿ ವಾಣಿಜ್ಯ ವಿಷಯಗಳಿಗೆ ಪರೀಕ್ಷೆಯನ್ನು ನಡೆಸಲಾಗುತ್ತದೆ. ಸದರಿ ಪರೀಕ್ಷೆಗೆ ದಿನಾಂಕ: 14/12/2022 ರಿಂದ ರಾಜ್ಯದಲ್ಲಿ ಮಾನ್ಯತೆ ಪಡೆದ ವಾಣಿಜ್ಯ ಸಂಸ್ಥೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಪರೀಕ್ಷೆಗೆ ಹಾಜರಾಗಲು ಅಭ್ಯರ್ಥಿಗಳ ಅರ್ಜಿಗಳನ್ನು ಸಂಬಂಧಿಸಿದ ವಾಣಿಜ್ಯ ಸಂಸ್ಥೆಗಳ ಮುಖಾಂತರ ಸಲ್ಲಿಸಬೇಕಿದೆ. ವಾಣಿಜ್ಯ ಸಂಸ್ಥೆಗಳ ಮುಖ್ಯಸ್ಥರು ತಮ್ಮ ಸಂಸ್ಥೆಯಿಂದ ಪರೀಕ್ಷೆಗೆ ಹಾಜರಾಗುವ ಅರ್ಹ ಅಭ್ಯರ್ಥಿಗಳ ವಿವರಗಳನ್ನು ಮಂಡಳಿಯ ಜಾಲತಾಣ https://sslc.karnataka.gov.in ಇಲ್ಲಿ login/Other exams/commerce examination ನಲ್ಲಿ Institute login ಮೂಲಕ Upload ಮಾಡಲು ಸೂಚಿಸಿದೆ.

**ವಾಣಿಜ್ಯ ಪರೀಕ್ಷೆ ತೆಗೆದುಕೊಳ್ಳಲು ಅಭ್ಯರ್ಥಿಗಳಿಗಿರಬೇಕಾದ ಅರ್ಹತೆಗಳು:-**

- ಸರ್ಕಾರಿ ಆದೇಶ ಸಂಖ್ಯೆ: ಇಡಿ4 ಎಲ್‌ಸಿಇ 2002, ಬೆಂಗಳೂರು ದಿನಾಂಕ: 28.01.2003ರಂತೆ ಎಸ್.ಎಸ್.ಎಲ್.ಸಿ./ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣ/ಅನುತ್ತೀರ್ಣರಾದ ವಿದ್ಯಾರ್ಥಿಗಳು ಆಂಗ್ಲ ಅಥವಾ ಕನ್ನಡ ಬೆರಳಚ್ಚು ಪ್ರಥಮ ದರ್ಜೆ ಪರೀಕ್ಷೆಗೆ ಹಾಜರಾಗಲು ಅರ್ಹತೆ ಪಡೆದಿರುತ್ತಾರೆ.
- ಕನ್ನಡ ಹಾಗೂ ಆಂಗ್ಲ ಬೆರಳಚ್ಚು ಪ್ರೌಢದರ್ಜೆ ಪರೀಕ್ಷೆ ತೆಗೆದುಕೊಳ್ಳಲು ಎಸ್.ಎಸ್.ಎಲ್.ಸಿ/ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಹಾಗೂ ಕನ್ನಡ ಮತ್ತು ಆಂಗ್ಲ ಬೆರಳಚ್ಚು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ 10 ತಿಂಗಳು ಪೂರ್ಣಗೊಳಿಸಿರಬೇಕು.
- ಆಂಗ್ಲ ಮತ್ತು ಕನ್ನಡ ಶೀಘ್ರಲಿಪಿ ಪ್ರಥಮದರ್ಜೆ ಪರೀಕ್ಷೆ ತೆಗೆದುಕೊಳ್ಳಲು ಎಸ್.ಎಸ್.ಎಲ್.ಸಿ/ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
- ಆಂಗ್ಲ ಶೀಘ್ರಲಿಪಿ ಮಧ್ಯಮ ದರ್ಜೆ ಪರೀಕ್ಷೆ ತೆಗೆದುಕೊಳ್ಳಲು ಎಸ್.ಎಸ್.ಎಲ್.ಸಿ/ತತ್ಸಮಾನ ಮತ್ತು ಆಂಗ್ಲ ಶೀಘ್ರಲಿಪಿ ಪ್ರಥಮ ದರ್ಜೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
- ಪ್ರೌಢದರ್ಜೆ ಶೀಘ್ರಲಿಪಿ ಪರೀಕ್ಷೆಗಳನ್ನು ಕಟ್ಟಲು ಪ್ರಥಮ ದರ್ಜೆ ಶೀಘ್ರಲಿಪಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ 10 ತಿಂಗಳು ಪೂರ್ಣಗೊಳಿಸಿರಬೇಕು.
- ಆಂಗ್ಲ/ಕನ್ನಡ ಶೀಘ್ರಲಿಪಿ ಪ್ರವೀಣ ದರ್ಜೆ ಪರೀಕ್ಷೆ ತೆಗೆದುಕೊಳ್ಳಲು ಎಸ್.ಎಸ್.ಎಲ್.ಸಿ/ತತ್ಸಮಾನ ಪರೀಕ್ಷೆ ಮತ್ತು ಆಂಗ್ಲ/ ಕನ್ನಡ ಶೀಘ್ರಲಿಪಿ ಪ್ರೌಢದರ್ಜೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
- ಮುದ್ರಣ ಪರೀಕ್ಷೆ ತೆಗೆದುಕೊಳ್ಳಲು 7ನೇ ತರಗತಿ/ಎಸ್.ಎಸ್.ಎಲ್.ಸಿ/ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಹಾಗೂ ಸರ್ಕಾರಿ ಮುದ್ರಣಾಲಯದ ಖಾಯಂ ನೌಕರರಾಗಿಬೇಕು.
- ಆಂಗ್ಲ ಮತ್ತು ಕನ್ನಡ ಬೆರಳಚ್ಚು ಪರೀಕ್ಷೆಗಳಿಗೆ ತಂಡಗಳನ್ನು(ಬ್ಯಾಚ್) ಸರಿಯಾಗಿ ನಮೂದಿಸಬೇಕು. ಪ್ರಥಮ ದರ್ಜೆಗೆ ಎ,ಬಿ,ಸಿ,ಡಿ,ಇ ತಂಡಗಳೆಂದೂ, ಪ್ರೌಢದರ್ಜೆಗೆ ಎ,ಬಿ,ಸಿ,ಡಿ ತಂಡಗಳೆಂದು ವಿಂಗಡಿಸಿ ಆನ್‌ಲೈನ್‌ನಲ್ಲಿ ಅರ್ಜಿಸಲ್ಲಿಸುವಾಗ ನಮೂದಿಸಬೇಕು. **ಯಾವುದೇ ಕಾರಣಕ್ಕೂ ತಂಡ ಬದಲಾವಣೆಗೆ ಅವಕಾಶವಿರುವುದಿಲ್ಲ.**
- ಆಂಗ್ಲ ಬೆರಳಚ್ಚು ಪ್ರವೀಣ ದರ್ಜೆ(01 XYZ), ಕನ್ನಡ ಬೆರಳಚ್ಚು ಪ್ರವೀಣ ದರ್ಜೆ (ವಿಷಯ ಸಂಕೇತ 06 XYZ) ಆಂಗ್ಲ ಶೀಘ್ರಲಿಪಿ ಪ್ರವೀಣ ದರ್ಜೆ(ವಿಷಯ ಸಂಕೇತ 11 XYZ) ಮತ್ತು ಕನ್ನಡ ಶೀಘ್ರಲಿಪಿ ಪ್ರವೀಣ ದರ್ಜೆ (ವಿಷಯ ಸಂಕೇತ 16 XYZ) ಪರೀಕ್ಷೆಗಳನ್ನು ರಾಜ್ಯದ ಒಂದು ಕೇಂದ್ರದಲ್ಲಿ ಮಾತ್ರ ನಡೆಸಲಾಗುತ್ತದೆ.

- ಮುದ್ರಣ ಪರೀಕ್ಷೆಗಳನ್ನು ಕೇಂದ್ರ ಸರ್ಕಾರಿ ಮುದ್ರಣಾಲಯ, ಮೈಸೂರು ರಸ್ತೆ, ಆರ್.ವಿ.ಕಾಲೇಜು ಅಂಚೆ, ಬೆಂಗಳೂರು ಇಲ್ಲಿ ಮಾತ್ರ ನಡೆಸಲಾಗುತ್ತದೆ.

## ಫಲಿತಾಂಶ ಉತ್ತಮಪಡಿಸಿಕೊಳ್ಳುವಿಕೆ

- **ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಬಯಸುವ ಅಭ್ಯರ್ಥಿಗಳು ಶುಲ್ಕ ಪಾವತಿಸಿ ಮಂಡಳಿಯಿಂದ ಅನುಮತಿ ಪಡೆದುಕೊಂಡಿರಬೇಕು.**
- **ಸಂಸ್ಥೆಯ ಮುಖಾಂತರ ಅರ್ಜಿಯನ್ನು ಸಲ್ಲಿಸಬೇಕು.**
- **ಅನುಮತಿ ಪತ್ರದೊಂದಿಗೆ ಪರೀಕ್ಷಾ ಶುಲ್ಕವನ್ನು ಆನ್‌ಲೈನ್‌ನಲ್ಲಿ ಪಾವತಿಸಬೇಕು.**
- **ಅಭ್ಯರ್ಥಿ ಈ ಹಿಂದಿನ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ತೆಗೆದುಕೊಳ್ಳಬೇಕು. ಪರೀಕ್ಷಾ ಕೇಂದ್ರ ಬದಲಾವಣೆಗೆ ಅವಕಾಶ ಇರುವುದಿಲ್ಲ.**
- **ಸದರಿ ಪರೀಕ್ಷೆಯಲ್ಲಿ ಫಲಿತಾಂಶ ಉತ್ತಮವಾಗದಿದ್ದ ಪಕ್ಷದಲ್ಲಿ ಹಿಂದಿನ ಫಲಿತಾಂಶವನ್ನು ಪರಿಗಣಿಸಲಾಗುವುದು.**

## ಖಾಸಗಿ ಅಭ್ಯರ್ಥಿಗಳು

- ಖಾಸಗಿ ಅಭ್ಯರ್ಥಿಗಳಾಗಿ ಅರ್ಜಿ ಸಲ್ಲಿಸುತ್ತಿರುವ ಅಭ್ಯರ್ಥಿಗಳು ವಾಣಿಜ್ಯ ಸಂಸ್ಥೆಗಳ ಮುಖಾಂತರ **ದಿನಾಂಕ:15/12/2022** ರೊಳಗೆ ರೂ. 180/- ನೋಂದಣಿ ಶುಲ್ಕವನ್ನು ಪಾವತಿಸಿ ಮಂಡಲಿಯಿಂದ ನೋಂದಣಿ ಪ್ರಮಾಣ ಪತ್ರವನ್ನು ಪಡೆಯಬೇಕು. ನಂತರ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ನಿಗದಿತ ಕಾಲಂನಲ್ಲಿ ಮಂಡಲಿ ನೀಡಿರುವ ಅನುಮತಿ ಪತ್ರದ ಸಂಖ್ಯೆಯನ್ನು ನಮೂದಿಸಬೇಕು.
- ಅಭ್ಯರ್ಥಿಗಳು ಜೂನಿಯರ್ ಪರೀಕ್ಷೆ ಉತ್ತೀರ್ಣರಾಗದೇ ನೇರವಾಗಿ ಪ್ರೌಢದರ್ಜೆ ಪರೀಕ್ಷೆ ತೆಗೆದುಕೊಳ್ಳುವಂತಿಲ್ಲ ಹಾಗೂ ಎರಡೂ ಪರೀಕ್ಷೆಗಳನ್ನು ಒಂದೇ ಬಾರಿ ತೆಗೆದುಕೊಳ್ಳಲು ಅವಕಾಶವಿಲ್ಲ.
- ವಾಣಿಜ್ಯ ಸಂಸ್ಥೆಯವರು ವಾರ್ಷಿಕ ನವೀಕರಣ ಶುಲ್ಕ ರೂ.205-00ನ್ನು ಆನ್‌ಲೈನ್ ಹಾಗೂ ಚಲನ್ ಮೂಲಕ ಪಾವತಿಸಲು ಸಂಸ್ಥೆಯ ಲಾಗಿನ್‌ನಲ್ಲಿ ಅವಕಾಶ ಕಲ್ಪಿಸಿದೆ. ಶುಲ್ಕ ಪಾವತಿಸಿದ ಬ್ಯಾಂಕ್ ಸಂದಾಯದ ರಶೀದಿಯಲ್ಲಿ Transaction Status ನಲ್ಲಿ Transaction Successfull ಆಗಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
- ಯಾವುದೇ ವಾಣಿಜ್ಯ ಸಂಸ್ಥೆಯವರು ಅನುಮತಿ ಪಡೆದಿರುವ ವಿಷಯಗಳನ್ನಲ್ಲದೇ ಬೇರೆ ವಿಷಯಗಳಲ್ಲಿ ಅಭ್ಯರ್ಥಿಗಳನ್ನು ಪರೀಕ್ಷೆಗೆ ಹಾಜರು ಪಡಿಸಿದ್ದು ಕಂಡುಬಂದಲ್ಲಿ ಮಂಡಳಿಯ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

## ಪರೀಕ್ಷಾ ವಿಷಯಗಳು:

| ಪರೀಕ್ಷಾ ವಿಷಯಗಳು | ಜನವರಿ-2023 ರ ಅವಧಿಯಲ್ಲಿ ನಡೆಸಲಾಗುವ ವಾಣಿಜ್ಯ ಪರೀಕ್ಷೆಯ ವಿಷಯ ಸಂಕೇತ ಮತ್ತು ದರ್ಜೆಗಳು | |
|---|---|---|
| | ವಿಷಯ ಸಂಕೇತದ ಸಂಖ್ಯೆ | ದರ್ಜೆ |
| ಆಂಗ್ಲ ಮತ್ತು ಕನ್ನಡ ಬೆರಳಚ್ಚು | 03 XY, 08 XY | ಪ್ರೌಢ ದರ್ಜೆ |
| | 05 XY, 10 XY | ಪ್ರಥಮ ದರ್ಜೆ |
| ಆಂಗ್ಲ ಶೀಘ್ರಲಿಪಿ | 11 XYZ | ಪ್ರವೀಣ ದರ್ಜೆ |
| | 13 XYZ | ಪ್ರೌಢ ದರ್ಜೆ |
| | 14 XY | ಮಧ್ಯಮ ದರ್ಜೆ |
| | 15 XY | ಪ್ರಥಮ ದರ್ಜೆ |
| ಕನ್ನಡ ಶೀಘ್ರಲಿಪಿ | 16 XYZ | ಪ್ರವೀಣ ದರ್ಜೆ |
| | 18 XYZ | ಪ್ರೌಢದರ್ಜೆ |
| | 20 XY | ಪ್ರಥಮ ದರ್ಜೆ |
| ಮುದ್ರಣ ಪರೀಕ್ಷೆಗಳು | 31 XY, 33XY, 35XY, 37XY | ಪ್ರೌಢದರ್ಜೆ |
| | 32XY, 34XY, 36XY, 38XY | ಪ್ರಥಮ ದರ್ಜೆ |

ವಿಷಯವಾರು ಪರೀಕ್ಷಾ ಶುಲ್ಕದ ವಿವರಗಳು

| ಕ್ರ.ಸಂ | ವಿಷಯಗಳು | ಪ್ರಥಮದರ್ಜೆ | ಮಧ್ಯಮ ದರ್ಜೆ | ಪ್ರೌಢ ದರ್ಜೆ | ಪ್ರವೀಣ ದರ್ಜೆ |
|---|---|---|---|---|---|
| 1. | ಆಂಗ್ಲ ಮತ್ತು ಕನ್ನಡ ಬೆರಳಚ್ಚು | 390-00 | – | 430-00 | – |
| 2. | ಆಂಗ್ಲ ಶೀಘ್ರಲಿಪಿ | 430-00 | 456-00 | 468-00 | 624-00 |
| 3. | ಕನ್ನಡ ಶೀಘ್ರಲಿಪಿ | 430-00 | – | 468-00 | 624-00 |
| 4 | ಮುದ್ರಣ ಪರೀಕ್ಷೆಗಳು | 468-00 | – | 499-00 | – |

ಪರಿಶಿಷ್ಠ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ಇದ್ದು, ಅರ್ಜಿ ಶುಲ್ಕ ಮತ್ತು ಅಂಕಪಟ್ಟಿ ಶುಲ್ಕ, ಒಟ್ಟು ರೂ.10/-ಗಳನ್ನು ಪಾವತಿಸಬೇಕಾಗುತ್ತದೆ.

ನೆಫ್ಟ್ ಚಲನ್ ಹಾಗೂ ಅರ್ಜಿಗಳನ್ನು ಸಲ್ಲಿಸಲು ನಿಗದಿಗೊಳಿಸಿರುವ ದಿನಾಂಕಗಳ ವಿವರ

| ಕ್ರ ಸಂ | ವಿವರ | ನಿಗದಿಪಡಿಸಿರುವ ದಿನಾಂಕ |
|---|---|---|
| 01 | ಮಾನ್ಯತೆ/ಮಾನ್ಯತೆ ನವೀಕರಣ ಪತ್ರವನ್ನು ಅಪ್‌ಲೋಡ್ ಮಾಡುವುದು ಹಾಗೂ ನವೀಕರಣ ಶುಲ್ಕ ರೂ.205-00ಗಳನ್ನು ಆನ್‌ಲೈನ್ ಮೂಲಕ ಪಾವತಿಸಲು ನಿಗದಿಪಡಿಸಿದ ದಿನಾಂಕ | 14/12/2022 ರಿಂದ 24/12/2022 ರವರೆಗೆ |
| 02 | ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು ತಮ್ಮ ಲಾಗಿನ್‌ನಲ್ಲಿ ಆನ್‌ಲೈನ್ ಮೂಲಕ ಅನುಮೋದಿಸುವುದು. | 14/12/2022 ರಿಂದ 24/12/2022 ರವರೆಗೆ |
| 03 | ಮಂಡಳಿ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮೂಲಕ ಅಭ್ಯರ್ಥಿಗಳ ಅರ್ಜಿಯನ್ನು ಅಪ್‌ಲೋಡ್ ಮಾಡುವ ದಿನಾಂಕ (ದಂಡರಹಿತವಾಗಿ) | 14/12/2022 ರಿಂದ 26/12/2022 ರವರೆಗೆ |
| 04 | ಮಂಡಳಿ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮೂಲಕ ಅಭ್ಯರ್ಥಿಗಳ ಅರ್ಜಿಯನ್ನು ದಂಡ ಸಹಿತವಾಗಿ(ದಿನವೊಂದಕ್ಕೆ ರೂ.150-00ರಂತೆ) ಅಪ್‌ಲೋಡ್ ಮಾಡುವ ದಿನಾಂಕ | 27/12/2022 ರಿಂದ 30/12/2022 ರವರೆಗೆ |
| 05 | ಮಂಡಳಿ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮೂಲಕ ಅಭ್ಯರ್ಥಿಗಳ ಪರೀಕ್ಷಾ ಶುಲ್ಕದ ಚಲನ್ ಮುದ್ರಿಸಿಕೊಂಡು ನೆಫ್ಟ್ ಮೂಲಕ ಅಥವಾ ಆನ್‌ಲೈನ್ ಮೂಲಕ ಶುಲ್ಕ ಪಾವತಿ ಮಾಡುವ ದಿನಾಂಕ | 02/01/2023 ರಿಂದ 05/01/2023 ರವರೆಗೆ |
| 06 | ನಾಮಿನಲ್ ರೋಲ್, ಶುಲ್ಕ ಪಾವತಿಸಿದ ಚಲನ್‌ನ ಮೂಲ ಪ್ರತಿ ಹಾಗೂ ಸಂಬಂಧಿಸಿದ ಇತರೆ ದಾಖಲೆಗಳನ್ನು ಸಲ್ಲಿಸಿ ಡಯಟ್ ಲಾಗಿನ್‌ನಲ್ಲಿ ಉಪನಿರ್ದೇಶಕರು(ಅಭಿವೃದ್ಧಿ)ರವರು ಅನುಮೋದಿಸುವುದು | 02/01/2023 ರಿಂದ 06/01/2023 ರವರೆಗೆ |
| 07 | ನಾಮಿನಲ್ ರೋಲ್, ಶುಲ್ಕ ಪಾವತಿಸಿದ ಚಲನ್‌ನ ಮೂಲ ಪ್ರತಿ ಹಾಗೂ ಸಂಬಂಧಿಸಿದ ಇತರೆ ದಾಖಲೆಗಳನ್ನು ಉಪನಿರ್ದೇಶಕರು(ಅಭಿವೃದ್ಧಿ) ಮಂಡಳಿಗೆ ಸಲ್ಲಿಸುವುದು. | 07/01/2023 |

ಶಾಲಾ ಸಂಕೇತ ನವೀಕರಣ ಶುಲ್ಕ ಪಾವತಿಸುವ ಹಾಗೂ ಮಾನ್ಯತೆ ನವೀಕರಣ ಪ್ರತಿ ಅಪ್‌ಲೋಡ್ ಮಾಡುವ ವಿಧಾನ

2023ರ ಜನವರಿ ಮಾಹೆಯಲ್ಲಿ ನಡೆಯುವ ವಾಣಿಜ್ಯ ವಿಷಯಗಳ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಂಸ್ಥೆಗಳ ಮುಖ್ಯಸ್ಥರು ತಮ್ಮ Institute login ನಲ್ಲಿ ಸಂಸ್ಥೆಯ ಮಾನ್ಯತೆ/ಮಾನ್ಯತೆ ನವೀಕರಣ ಪ್ರತಿಯನ್ನು pdf ನಮೂನೆ(1mb size) ನಮೂನೆಯಲ್ಲಿ ಸ್ಕ್ಯಾನ್ ಮಾಡಿ Upload ಮಾಡುವುದು.

- ಶಾಲಾ ಸಂಕೇತ ನವೀಕರಣ ಶುಲ್ಕ ರೂ. 205-00ಗಳನ್ನು Institute login ನಲ್ಲಿ ಆನ್‌ಲೈನ್ ಮೂಲಕ ಪಾವತಿಸಲು ಅವಕಾಶ ಕಲ್ಪಿಸಿದ್ದು, Debit card/Credit card/Net Banking ಮೂಲಕ ಶುಲ್ಕ ಪಾವತಿಸಬೇಕಾಗಿರುತ್ತದೆ. (ಶುಲ್ಕ ಪಾವತಿಸಿದ ಬ್ಯಾಂಕ್ ಸಂದಾಯದ ರಶೀದಿಯಲ್ಲಿ Transaction Status ನಲ್ಲಿ Transaction Successfull ಆಗಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು)

ಮಾನ್ಯತೆ/ಮಾನ್ಯತೆ ನವೀಕರಣ ಪ್ರತಿಯನ್ನು Institute login ನಲ್ಲಿ Upload ಮಾಡಿ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು ಅನುಮೋದಿಸಿದ ನಂತರವಷ್ಟೇ ಆನ್‌ಲೈನ್ ನಲ್ಲಿ ಪರೀಕ್ಷಾ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ.

## ಪರೀಕ್ಷಾ ಶುಲ್ಕ ಪಾವತಿಸುವ ವಿಧಾನ

ಅಭ್ಯರ್ಥಿಗಳ ಅರ್ಜಿಗಳನ್ನು ವಾಣಿಜ್ಯ ಸಂಸ್ಥೆಯ ಪ್ರಾಚಾರ್ಯರು ಮಂಡಳಿಯ ಜಾಲತಾಣದಲ್ಲಿ ಸಂಸ್ಥೆಯ login ಮೂಲಕ Upload ಮಾಡಬೇಕು. ಅರ್ಜಿ ಸಲ್ಲಿಸುವ ಪ್ರಕ್ರಿಯೆ ಪೂರ್ಣಗೊಂಡ ನಂತರ ಪರೀಕ್ಷಾ ಶುಲ್ಕ ಪಾವತಿಗೆ ಸಂಬಂಧಪಟ್ಟಂತೆ ಆನ್‌ಲೈನ್‌ನಲ್ಲಿ ಅರ್ಜಿಗಳ ಸಂಖ್ಯೆಗೆ ಅನುಗುಣವಾಗಿ ಆನ್‌ಲೈನ್‌ನಲ್ಲಿ ಶುಲ್ಕ ಪಾವತಿಸಲು ಅವಕಾಶ ಕಲ್ಪಿಸಿದೆ.

ಪರೀಕ್ಷಾ ಶುಲ್ಕವನ್ನು ಸಂಸ್ಥೆಯ ಲಾಗಿನ್‌ನಲ್ಲಿ ಲಭ್ಯ ಮಾಡಲಾಗುವ ಆನ್‌ಲೈನ್ ವಿಧಾನದಲ್ಲಿ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ. ಆನ್‌ಲೈನ್‌ನಲ್ಲಿ Debit card/Credit card/Net Banking ಮುಖಾಂತರ ಮಾತ್ರ ಪರೀಕ್ಷಾ ಶುಲ್ಕವನ್ನು ಪಾವತಿಸಬಹುದಾಗಿದೆ. ಇತರೆ ಯಾವುದೇ ಚಲನ್, ಡಿಡಿ, ಚೆಕ್ ಮೂಲಕ ಮಾಡಲಾದ ಪಾವತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ. ಹಾಗೂ ಶುಲ್ಕವನ್ನು ಪಾವತಿಸಿದಲ್ಲಿ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

## 2023ರ ಜನವರಿ ಮಾಹೆಯಲ್ಲಿ ನಡೆಯುವ ವಾಣಿಜ್ಯ ಪರೀಕ್ಷೆಗೆ ಸಂಬಂಧಿಸಿದಂತೆ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರುಗಳ ಪಾತ್ರ

1. ವಾಣಿಜ್ಯ ಸಂಸ್ಥೆಗಳಿಗೆ ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣದ ಸಕ್ಷಮ ಪ್ರಾಧಿಕಾರ ಸಂಬಂಧಪಟ್ಟ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರವರಾಗಿರುತ್ತಾರೆ.
2. ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು ಅನುಮೋದಿಸಲು ಸಂಬಂಧಪಟ್ಟ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರಿಗೆ Login ವ್ಯವಸ್ಥೆ ಕಲ್ಪಿಸಲಾಗಿದೆ.
3. 2023ರ ಜನವರಿ ಮಾಹೆಯಲ್ಲಿ ನಡೆಯುವ ವಾಣಿಜ್ಯ ಪರೀಕ್ಷೆಯ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸ್ವೀಕರಿಸುವ ಸಂದರ್ಭದಲ್ಲಿ ವಾಣಿಜ್ಯ ಸಂಸ್ಥೆಗಳ ಮುಖ್ಯಸ್ಥರು ತಮ್ಮ ಸಂಸ್ಥೆಯ ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು pdf ನಮೂನೆಯಲ್ಲಿ 1 mb ಗಾತ್ರದೊಳಗೆ Upload ಮಾಡಲು ತಿಳಿಸಿದೆ. ಸದರಿ ಮಾಹಿತಿಯನ್ನು ಪರಿಶೀಲಿಸಿ, ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು ಆನ್‌ಲೈನ್ ಮೂಲಕ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರ ಲಾಗಿನ್‌ನಲ್ಲಿ ಅನುಮೋದಿಸಲು/ತಿರಸ್ಕರಿಸಲು ಅವಕಾಶ ಕಲ್ಪಿಸಿದೆ.
4. ಸಂಸ್ಥೆಗಳ ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು ಒದಗಿಸಲಾದ ಲಾಗಿನ್‌ನಲ್ಲಿ ತಿರಸ್ಕರಿಸಿದಲ್ಲಿ Remarks ಕಾಲಂನಲ್ಲಿ ಸಕಾರಣವನ್ನು ಕಡ್ಡಾಯವಾಗಿ ನಮೂದಿಸುವುದು. ತಿರಸ್ಕೃತಗೊಂಡ ವಾಣಿಜ್ಯ ಸಂಸ್ಥೆಯವರು ಸರಿಯಾದ ಮಾಹಿತಿಯನ್ನು ನಿಗದಿತ ಕಾಲಮಿತಿಯೊಳಗೆ ಒದಗಿಸಿದಲ್ಲಿ ಮತ್ತೊಮ್ಮೆ ಅನುಮೋದಿಸಲು ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರ Loginನಲ್ಲಿ ಅವಕಾಶ ಕಲ್ಪಿಸಿದೆ. ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು 24 ಗಂಟೆಗಳ ಒಳಗಾಗಿ ಅನುಮೋದಿಸಲು ತಿಳಿಸಿದೆ.
5. ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು ಅನುಮೋದಿಸಿದ ನಂತರವಷ್ಟೆ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ. ಹಾಗಾಗಿ ಈ ಬಗ್ಗೆ ಅಗತ್ಯ ಕ್ರಮವಹಿಸುವುದು.

## ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವಾಗ ಸಂಸ್ಥೆಯ ಮುಖ್ಯಸ್ಥರು ಪಾಲಿಸಬೇಕಾದ ಸೂಚನೆಗಳು:-

- 2023ರ ಜನವರಿ ಮಾಹೆಯಲ್ಲಿ ನಡೆಯುವ ವಾಣಿಜ್ಯ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ನೋಂದಣಿ ಮಾಹಿತಿಯನ್ನು ಮಂಡಳಿ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮುಖಾಂತರ ಅಪ್‌ಲೋಡ್ ಮಾಡುವುದು.
- ಪರೀಕ್ಷಾ ಶುಲ್ಕದಿಂದ ವಿನಾಯಿತಿ ಪಡೆಯಲು ಬಯಸುವ ಅಭ್ಯರ್ಥಿಗಳಿಂದ ಕಡ್ಡಾಯವಾಗಿ ನಿಗದಿತ ನಮೂನೆಯಲ್ಲಿ ಜಾತಿ ಪ್ರಮಾಣ ಪತ್ರವನ್ನು ಪಡೆದು, ಅರ್ಜಿಯ ನಿಗದಿತ ಕಾಲಂನಲ್ಲಿ ಪ್ರಮಾಣ ಪತ್ರದ **RD** ಸಂಖ್ಯೆಯನ್ನು ನಮೂದಿಸಬೇಕು.
- 2002 ಹಾಗೂ ಅದಕ್ಕಿಂತ ಹಿಂದಿನ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳ ಹಾಗೂ ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ಅಂಕಪಟ್ಟಿಗಳನ್ನು ಪರಿಶೀಲಿಸಿ ಆನ್‌ಲೈನ್‌ನಲ್ಲಿ ಅರ್ಜಿ NON KSEAB OPTION ಬಳಸಿ ಸಲ್ಲಿಸುವಾಗ ಎಲ್ಲಾ ಮಾಹಿತಿಗಳನ್ನು ಸರಿಯಾಗಿ ತುಂಬಬೇಕು.

- 2003ರ ಹಾಗೂ 2003ರ ನಂತರದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ಮಾಹಿತಿಯನ್ನು ಅಪ್‌ಲೋಡ್ ಮಾಡುವಾಗ ಎಸ್.ಎಸ್.ಎಲ್.ಸಿ ನೊಂದಣಿ ಸಂಖ್ಯೆಯನ್ನು ನಮೂದಿಸಿದಾಗ ಮಾಹಿತಿಗಳು AUTO FETCH ಆಗುತ್ತವೆ. ಉಳಿದ ಮಾಹಿತಿಗಳನ್ನು ಸಂಸ್ಥೆಯ ಮುಖ್ಯಸ್ಥರು ಭರ್ತಿ ಮಾಡುವುದು.
- ಜನವರಿ–2023 ರ ವಾಣಿಜ್ಯ ಪರೀಕ್ಷೆಗೆ ಅರ್ಜಿಸಲ್ಲಿಸುತ್ತಿರುವ ಎಲ್ಲಾ ಅಭ್ಯರ್ಥಿಗಳು ಮಂಡಲಿಯ ನಿಯಮಾನುಸಾರ ಕನಿಷ್ಠ ಹಾಜರಾತಿ ಹೊಂದಿರುವ ಬಗ್ಗೆ ದೃಢೀಕರಿಸಿಕೊಳ್ಳುವುದು. ಒಂದುವೇಳೆ ಕನಿಷ್ಠ ಹಾಜರಾತಿಗಿಂತ ಕಡಿಮೆ ಹಾಜರಾತಿ ಹೊಂದಿರುವ ಅಭ್ಯರ್ಥಿಗಳಿಗೆ ಪರೀಕ್ಷೆಗೆ ಅರ್ಜಿ ಸಲ್ಲಿಸಿದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಸ್ಥೆಯ ಪ್ರಾಚಾರ್ಯರೇ ಹೊಣೆಗಾರರಾಗುತ್ತಾರೆ.
- ಅರ್ಜಿಗಳನ್ನು ಸ್ವೀಕರಿಸುವ ಅಂತಿಮ ದಿನಾಂಕದ ನಂತರ ಅರ್ಜಿಯಲ್ಲಿ ಅಭ್ಯರ್ಥಿಗಳ ಮಾಹಿತಿಗಳು ತಿದ್ದುಪಡಿ ಮಾಡಬೇಕಾದಲ್ಲಿ ಮಂಡಲಿ ನಿಗದಿಪಡಿಸಿದ ಅವಧಿಯಲ್ಲಿ ಮಾತ್ರ ತಿದ್ದುಪಡಿ ಮಾಡಿಕೊಳ್ಳತಕ್ಕದ್ದು.
- ಎಸ್.ಎಸ್.ಎಲ್.ಸಿ. ನೊಂದಣಿ ಸಂಖ್ಯೆ ಮೂಲಕ **AUTO FETCH** ಆದ ಮಾಹಿತಿಗಳನ್ನು ತಿದ್ದುಪಡಿ ಮಾಡಿಕೊಳ್ಳಲು ಅವಕಾಶ ಇರುವುದಿಲ್ಲ. ಇದನ್ನು ಹೊರತುಪಡಿಸಿ ಉಳಿದ ಮಾಹಿತಿಗಳಲ್ಲಿ ತಿದ್ದುಪಡಿಗಳನ್ನು ಅಪೇಕ್ಷಿಸಿದಲ್ಲಿ ಡಯಟ್ ಅನುಮೋದನೆ ನೀಡುವ ಮುಂಚಿತವಾಗಿ ಸಂಸ್ಥೆಯ ಲಾಗಿನ್‌ನಲ್ಲಿ ಲಭ್ಯವಿರುವ Update Application ಆಯ್ಕೆ ಬಳಸಿ ತಿದ್ದುಪಡಿ ಮಾಡಿಕೊಳ್ಳಬಹುದಾಗಿದೆ. ಡಯಟ್‌ನಿಂದ ಅನುಮೋದನೆಗೊಂಡ ನಂತರ ಅರ್ಜಿಯಲ್ಲಿನ ಯಾವುದೇ ಮಾಹಿತಿಗಳ ತಿದ್ದುಪಡಿಗೆ ಅವಕಾಶ ಇರುವುದಿಲ್ಲ. ನಿಗದಿಪಡಿಸಿದ ದಿನಾಂಕದ ನಂತರ ಯಾವುದೇ ಮಾಹಿತಿಯ ತಿದ್ದುಪಡಿಗೆ ಅವಕಾಶವಿರುವುದಿಲ್ಲ.
- **ಮಂಡಲಿಯ ಗಮನಕ್ಕೆ ತರದೇ ಪರೀಕ್ಷಾ ಕೇಂದ್ರಗಳ ಬದಲಾವಣೆ ಮಾಡಿಕೊಂಡು ಅಭ್ಯರ್ಥಿಗಳನ್ನು ಪರೀಕ್ಷೆಗೆ ಹಾಜರು ಪಡಿಸಿದಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದಿಲ್ಲ. ಇಂತಹ ಪ್ರಕರಣ ಕಂಡುಬಂದಲ್ಲಿ ಸಂಬಂಧಿಸಿದ ಸಂಸ್ಥೆಯ ವಿರುದ್ಧ ಕ್ರಮ ಕೈಗೊಳ್ಳಾಗುವುದು.**
- ಆನ್‌ಲೈನ್‌ನಲ್ಲಿ ಪರೀಕ್ಷಾ ವಿಷಯ ಹಾಗೂ ಪರೀಕ್ಷಾ ಕೇಂದ್ರ ಆಯ್ಕೆ ಮಾಡುವ ಮೊದಲು ಸರಿಯಾಗಿ ಪರಿಶೀಲಿಸಿಕೊಂಡು ಆಯ್ಕೆ ಮಾಡುವುದು. ಒಮ್ಮೆ ಆಯ್ಕೆ ಮಾಡಿದ ನಂತರ ವಿಷಯ ಬದಲಾವಣೆಗೆ ಹಾಗೂ ಕೇಂದ್ರ ಬದಲಾವಣೆಗೆ ಅವಕಾಶ ಇರುವುದಿಲ್ಲ.
- ಒಂದು ವೇಳೆ ಆಯ್ಕೆ ಮಾಡಲಾದ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಕೇಂದ್ರ ಸ್ಥಾಪಿಸಲು ಅಗತ್ಯ ಸಂಖ್ಯೆಗಿಂತ ಕಡಿಮೆ ಇದ್ದಲ್ಲಿ ಮಂಡಳಿಯ ಹಂತದಲ್ಲಿ ಸಮೀಪದ ಕೇಂದ್ರಗಳಿಗೆ ವಿಲೀನಗೊಳಿಸಿ ಕೇಂದ್ರವನ್ನು ಬದಲಾಯಿಸಲಾಗುವುದು.
- ಸಂಸ್ಥೆಯ ಮುಖ್ಯಸ್ಥರು ಸಂಸ್ಥೆಯ ಲಾಗಿನ್‌ನಲ್ಲಿ ನಾಮಾಯಾದಿ ಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಂಡು ಪರಿಶೀಲಿಸಿ ಮೂಲ ಚಲನ್‌ನೊಂದಿಗೆ ಸಂಬಂಧಿಸಿದ ಡಯಟ್‌ಗೆ ಸಲ್ಲಿಸುವುದು.
- ಅಭ್ಯರ್ಥಿಗಳು ಅರ್ಜಿಯನ್ನು ನೋಂದಾಯಿಸಿದ ವಾಣಿಜ್ಯ ಸಂಸ್ಥೆಯ ಲಾಗಿನ್‌ಗೆ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು ಅಪ್‌ಲೋಡ್ ಮಾಡಲಾಗುವುದು. ಪರೀಕ್ಷೆಗೆ ನೋಂದಾಯಿಸಿದ ಅಭ್ಯರ್ಥಿಗಳು ಸದರಿ ವಾಣಿಜ್ಯ ಸಂಸ್ಥೆಯಿಂದಲೇ ಪ್ರವೇಶ ಪತ್ರಗಳನ್ನು ಪಡೆಯುವುದು.

ಮೇಲಿನ ಎಲ್ಲಾ ಸೂಚನೆಗಳನ್ನು ಸಂಬಂಧಪಟ್ಟ ವಾಣಿಜ್ಯ ಸಂಸ್ಥೆಯ ಮುಖ್ಯಸ್ಥರು ತಪ್ಪದೇ ಪಾಲಿಸಲು ತಿಳಿಸಿದೆ. ನಿಯಮಗಳನ್ನು ಪಾಲಿಸದಿದ್ದಲ್ಲಿ ಹಾಗೂ ತಪ್ಪು ಮಾಹಿತಿ/ದಾಖಲೆಗಳನ್ನು ಅಪ್‌ಲೋಡ್ ಮಾಡಿದಲ್ಲಿ ಮುಂದಿನ ತೊಂದರೆಗಳಿಗೆ ಸಂಬಂಧಿಸಿದ ಸಂಸ್ಥೆಯ ಪ್ರಾಚಾರ್ಯರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

- **<u>ವಿಶೇಷ ಸೂಚನೆ:–</u> ಪರೀಕ್ಷಾ ಅರ್ಜಿಗಳನ್ನು ಮಂಡಳಿಯ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮೂಲಕ ಸಲ್ಲಿಸುವ ಸಮಯದಲ್ಲಿ ವಿದ್ಯಾರ್ಥಿಗಳ ಭಾವಚಿತ್ರ 60 ರಿಂದ 80 KB ಹಾಗೂ ಸಹಿಯನ್ನು 20 ರಿಂದ 50 KB JPEG ನಮೂನೆಯಲ್ಲಿ ಅಪ್‌ಲೋಡ್ ಮಾಡುವುದು.**
- **ಭಾವಚಿತ್ರ ನೇರ ಭಂಗಿಯಲ್ಲಿರಬೇಕು ಹಾಗೂ ಭಾವಚಿತ್ರವನ್ನು ಮಾತ್ರವೇ ಸ್ಕ್ಯಾನ್ ಮಾಡಿಕೊಂಡು ಅಪ್‌ಲೋಡ್ ಮಾಡಬೇಕೆ ಹೊರತು ಇಡೀ ಪೇಪರ್ ಸ್ಕ್ಯಾನ್ ಮಾಡಿ ಅಪಲೋಡ್ ಮಾಡುವಂತಿಲ್ಲ.**

**ಜನವರಿ–2023ರ ವಾಣಿಜ್ಯ ಪರೀಕ್ಷೆಗೆ ಈ ಕೆಳಕಂಡ ದಾಖಲೆಗಳನ್ನು ಸಂಸ್ಥೆಯ ಪ್ರಾಚಾರ್ಯರು, ಸಂಬಂಧಿಸಿದ ಡಯಟ್‌ಗಳಿಗೆ ದಿನಾಂಕ: ರೊಳಗೆ ಸಲ್ಲಿಸುವುದು ಕಡ್ಡಾಯ.**

1. ಮುಖಪುಟ (Covering letter).
2. ಶುಲ್ಕ ಪಾವತಿಸಿದ ಬ್ಯಾಂಕ್‌ನ ಸಂದಾಯ ರಶೀದಿ ಪ್ರತಿ (Transaction Status ನಲ್ಲಿ Transaction Successfull ಆಗಿರುವ ಬಗ್ಗೆ ಕಡ್ಡಾಯವಾಗಿ ಗಮನಿಸುವುದು)
3. ನಾಮಯಾದಿ ಪಟ್ಟಿ (Nominal Roll).
4. ಶಾಲಾ ನವೀಕರಣ ಶುಲ್ಕ ರೂ. 205ಗಳನ್ನು ಆನ್‌ಲೈನ್‌ನಲ್ಲಿ ಪಾವತಿಸಿದ ಮುದ್ರಿತ ಪ್ರತಿ.
5. ತಮ್ಮ ವಾಣಿಜ್ಯ ಸಂಸ್ಥೆಯಿಂದ ಪರೀಕ್ಷೆಗೆ ನೋಂದಾಯಿಸಿದ ಎಲ್ಲಾ ಅಭ್ಯರ್ಥಿಗಳು ಕನಿಷ್ಠ 10 ತಿಂಗಳ ಹಾಜರಾತಿ ಹೊಂದಿದ್ದು, ಅಭ್ಯಾಸ ಪೂರ್ಣಗೊಳಿಸಿರುವ ಬಗ್ಗೆ ಸಂಸ್ಥೆಯ ಪ್ರಾಚಾರ್ಯರ ದೃಢೀಕರಣ.

**ಜನವರಿ–2023ರ ಮಾಹೆಯ ವಾಣಿಜ್ಯ ಪರೀಕ್ಷೆಗೆ ಸಂಬಂಧಿಸಿದಂತೆ ಉಪನಿರ್ದೇಶಕರು(ಅಭಿವೃದ್ಧಿ)ರವರ ಜವಾಬ್ದಾರಿಗಳು**

1. 2023ರ ಜನವರಿ ಮಾಹೆಯ ವಾಣಿಜ್ಯ ಪರೀಕ್ಷೆಗೆ ಸಂಬಂಧಿಸಿದಂತೆ, ಪ್ರತಿ ಡಯಟ್‌ಗಳಿಗೂ ಲಾಗಿನ್ ನೀಡಲಾಗಿದೆ. ಸಂಬಂಧಪಟ್ಟ ಜಿಲ್ಲೆಯ ವಾಣಿಜ್ಯ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಜನವರಿ–2023ರ ಪರೀಕ್ಷೆಗೆ ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಗಳ ಸಂಸ್ಥೆವಾರು ಮಾಹಿತಿಯನ್ನು ಮಂಡಲಿಯಿಂದ ಡಯಟ್ ಲಾಗಿನ್‌ನಲ್ಲಿ ಲಭ್ಯಗೊಳಿಸಲಾಗುವುದು.
2. ವಾಣಿಜ್ಯ ಸಂಸ್ಥೆಯವರು ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸಿದ ಮಾಹಿತಿಗಳನ್ನು ಪರಿಶೀಲಿಸಿ ಡಯಟ್ ಲಾಗಿನ್‌ನಲ್ಲಿ ಅಭ್ಯರ್ಥಿಗಳ ಮಾಹಿತಿಯನ್ನು ಅನುಮೋದಿಸುವುದು ಅಥವಾ ತಿರಸ್ಕರಿಸುವುದು(Approve/Reject)
3. ತಿರಸ್ಕೃತಗೊಂಡ ಅರ್ಜಿಗಳಿಗೆ Remarks ಕಾಲಂನಲ್ಲಿ ಸಕಾರಣವನ್ನು ನಮೂದಿಸುವುದು ಹಾಗೂ ಸರಿಯಾದ ಮಾಹಿತಿಯನ್ನು ಸಂಬಂಧಪಟ್ಟ ಸಂಸ್ಥೆಯವರು ನಿಗದಿತ ಅವಧಿಯಲ್ಲಿ ಒದಗಿಸಿದಲ್ಲಿ ಮತ್ತೊಮ್ಮೆ ಅನುಮೋದಿಸಲು ಡಯಟ್ ಲಾಗಿನ್‌ನಲ್ಲಿ ಅವಕಾಶ ಕಲ್ಪಿಸಿದೆ.
4. ವಾಣಿಜ್ಯ ಶಿಕ್ಷಣ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಪರೀಕ್ಷಾ ಕೇಂದ್ರಗಳನ್ನು ಗುರುತಿಸುವುದು, ಪರೀಕ್ಷಾ ಕೇಂದ್ರದ ಅಗತ್ಯ ಮಾನವ ಹಾಗೂ ಭೌತಿಕ ಸಂಪನ್ಮೂಲಗಳನ್ನು ಉಪನಿರ್ದೇಶಕರು(ಅಭಿವೃದ್ಧಿ) ಒದಗಿಸುವುದು.
5. ಉಪನಿರ್ದೇಶಕರು(ಅಭಿವೃದ್ಧಿ)ರವರಿಂದ ಡಯಟ್ ಲಾಗಿನ್‌ನಲ್ಲಿ ಅರ್ಜಿಗಳು ಅನುಮೋದನೆಗೊಂಡ ನಂತರವೇ ಅಭ್ಯರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗುತ್ತದೆ.
6. **ಡಯಟ್ ಸಂಸ್ಥೆಯವರು ಅರ್ಜಿಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ಗಮನಿಸಬೇಕಾದ ಅಂಶಗಳು:**
    1. ಅಭ್ಯರ್ಥಿಗಳ ಅರ್ಜಿಯ ಮುದ್ರಿತ ಪ್ರತಿ.
    2. ಪರಿಶಿಷ್ಟ ಜಾತಿ/ಪಂಗಡ ಅಭ್ಯರ್ಥಿಗಳಾಗಿದ್ದಲ್ಲಿ ಜಾತಿ ಪ್ರಮಾಣ ಪತ್ರದ RD ಸಂಖ್ಯೆಯನ್ನು ಪರಿಶೀಲಿಸುವುದು.
    3. ಆನ್‌ಲೈನ್‌ನಲ್ಲಿ ಶುಲ್ಕ ಪಾವತಿ ರಶೀದಿ
    4. ಇವುಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ಕೇಳುವಂತಿಲ್ಲ

**ಎ. ಮಾಹಿತಿಗಳು AUTO FETCH ಆಗಿರುವ ಅರ್ಜಿಗಳು:**

ವಾಣಿಜ್ಯ ಸಂಸ್ಥೆಯವರು ಆನ್‌ಲೈನ್‌ನಲ್ಲಿ ಸಲ್ಲಿಸಿರುವ ಅಭ್ಯರ್ಥಿಗಳ ಅರ್ಜಿಗಳನ್ನು ಡಯಟ್ ಲಾಗಿನ್‌ನಲ್ಲಿ ಲಭ್ಯ ಮಾಡಲಾಗುವ ನಾಮಿನಲ್ ರೋಲ್‌ನ Application Type ನಲ್ಲಿ Auto fetch ಎಂದು ನಮೂದಾಗಿರುವ ಮಾಹಿತಿಗಳು ಮುಂಡಳಿಯ ಡಾಟಾ ಬೇಸ್‌ನಿಂದ ಪಡೆಯಲಾಗಿರುತ್ತದೆ. ಡಯಟ್ ಹಂತದಲ್ಲಿ ಈ ಮಾಹಿತಿಗಳನ್ನು ಹೊರತುಪಡಿಸಿ ಮೇಲ್ಕಂಡ ಮಾಹಿತಿಗಳನ್ನು ಪರಿಶೀಲಿಸಿ ಡಯಟ್ ಲಾಗಿನ್‌ನಲ್ಲಿ Aprove/Reject ಮಾಡಬಹುದಾಗಿದೆ.

**ಬಿ. ಮಾಹಿತಿಗಳು AUTO FETCH ಆಗದೇ ಪೂರ್ಣ ಮಾಹಿತಿಗಳನ್ನು ಭರ್ತಿ ಮಾಡಿ ಸಲ್ಲಿಸಿರುವ ಅರ್ಜಿಗಳು:**

ಡಯಟ್ ಲಾಗಿನ್‌ನಲ್ಲಿ ಲಭ್ಯ ಮಾಡಲಾಗುವ ನಾಮಿನಲ್ ರೋಲ್‌ನ APPLICATION TYPE ನಲ್ಲಿ NON AUTO FETCH ಎಂದು ನಮೂದಿತವಾಗಿರುವ ಅರ್ಜಿಗಳ ಮಾಹಿತಿಗಳನ್ನು ಮಂಡಳಿಯ ಡಾಟಾಬೇಸ್‌ನಿಂದ ಪಡೆಯಲಾಗಿರುವುದಿಲ್ಲ. ಇವುಗಳನ್ನು ಸಂಸ್ಥೆಗಳ ಮುಖ್ಯಸ್ಥರು ದಾಖಲೆಗಳನ್ನು ಆಧರಿಸಿ ಭರ್ತಿ ಮಾಡಿರುತ್ತಾರೆ. ಇಂತಹ ಅರ್ಜಿಗಳನ್ನು ಅನುಮೋದಿಸುವಾಗ ಕೆಳಕಂಡ ಮಾಹಿತಿಗಳನ್ನು ಪರಿಶೀಲಿಸಿ ಡಯಟ್ ಲಾಗಿನ್‌ನಲ್ಲಿ APPROVE/REJECT ಮಾಡಬಹುದಾಗಿದೆ.

1. ಪರೀಕ್ಷೆಗೆ ಸಂಬಂಧಿಸಿದಂತೆ ವಿದ್ಯಾರ್ಹತೆಯ ಪ್ರಮಾಣ ಪತ್ರಗಳನ್ನು ಪರಿಶೀಲಿಸಿ ಈ ಬಗ್ಗೆ ಸಂಬಂಧಿಸಿದ ವಾಣಿಜ್ಯ ಸಂಸ್ಥೆಯ ಪ್ರಾಚಾರ್ಯರಿಂದ ನಕಲು ಪ್ರತಿಯನ್ನು ಪಡೆಯುವುದು.

2. ಪರಿಶಿಷ್ಟ ಜಾತಿ/ಪಂಗಡ ಅಭ್ಯರ್ಥಿಗಳಾಗಿದ್ದಲ್ಲಿ ಜಾತಿ ಪ್ರಮಾಣ ಪತ್ರದ RD ಸಂಖ್ಯೆಯನ್ನು ಪರಿಶೀಲಿಸುವುದು.
3. ಆನ್‌ಲೈನ್ ಮೂಲಕ ಪಾವತಿಸಿದ ಶುಲ್ ಸಂದಾಯ ರಶೀದಿ
4. ಮುದ್ರಣ ಪರೀಕ್ಷೆಗಳನ್ನು ಸರ್ಕಾರಿ ಮುದ್ರಣಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಭ್ಯರ್ಥಿಗಳಿಗಾಗಿ ಮಾತ್ರ ನಡೆಸಲಾಗುತ್ತಿದೆ. ಈ ಬಗ್ಗೆ ಪರಿಶೀಲಿಸಿ ಅನುಮೋದನೆ ನೀಡುವುದು.
5. ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಾಗಿದ್ದಲ್ಲಿ ಮಂಡಳಿಯಿಂದ ಪಡೆದಿರುವ ಅನುಮತಿ ಪತ್ರ.
6. ಖಾಸಗಿ ಅಭ್ಯರ್ಥಿಗಳಾಗಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮಂಡಳಿಯಿಂದ ಕಡ್ಡಾಯವಾಗಿ ಅನುಮತಿ ಪಡೆದು ದಿನಾಂಕ:15/12/2022 ರೊಳಗೆ ಅರ್ಜಿ ಸಲ್ಲಿಸಬೇಕು.

ಈ ಬಗ್ಗೆ ಯಾವುದಾದರೂ ಇತರೆ ದಾಖಲೆಗಳ ಅಗತ್ಯ ಕಂಡುಬಂದಲ್ಲಿ ಸಂಸ್ಥೆಯ ಪ್ರಾಚಾರ್ಯರಿಂದ ಪಡೆದು ಪರಿಶೀಲಿಸುವುದು. ಯಾವುದಾದರೂ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಿದಲ್ಲಿ ಸಕಾರಣವನ್ನು ಷರಾ (Remarks) ಕಾಲಂನಲ್ಲಿ ತಪ್ಪದೇ ನಮೂದಿಸುವುದು.

ಜನವರಿ–2023ರ ವಾಣಿಜ್ಯ ಪರೀಕ್ಷೆಗೆ ಸಂಸ್ಥೆಗಳ ಪ್ರಾಚಾರ್ಯರು ಸಲ್ಲಿಸಿದ ದಾಖಲೆಗಳನ್ನು ಡಯಟ್ ಸಂಸ್ಥೆಯವರು ಖುದ್ದಾಗಿ ಅಥವಾ ರಿಜಿಸ್ಟರ್ಡ್ ಅಂಚೆ ಮೂಲಕ ಈ ಕೆಳಕಂಡ ವಿಳಾಸಕ್ಕೆ ದಿನಾಂಕ: 07/01/2023 ರೊಳಗಾಗಿ ತಲುಪಿಸುವುದು.

ಸಹಾಯಕ ನಿರ್ದೇಶಕರು,
ವಾಣಿಜ್ಯ ಶಾಖೆ, 4ನೇ ಮಹಡಿ,
ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03

ಮಂಡಲಿಯ ದೂರವಾಣಿ ಸಂಖ್ಯೆ:**080–23360073**

ಇ–ಮೇಲ್ ವಿಳಾಸ: **adpisvsection@gmail.com**

**ಹೆಚ್ಚಿನ ವಿವರಗಳಿಗಾಗಿ ಈ ಕೆಳಕಂಡ ಮಂಡಲಿಯ ಜಾಲತಾಣವನ್ನು ನೋಡುವುದು.**

**https://sslc.karnataka.gov.in**

**ಸೂಚನೆ:– ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಗೆ ಸಂಬಂಧಿಸಿದಂತೆ Flow chart ಅನ್ನು ಸಂಸ್ಥೆಯ ಲಾಗಿನ್‌ನಲ್ಲಿ ಲಭ್ಯ ಮಾಡಲಾಗುವುದು. ಅದರಂತೆ ಕ್ರಮವಹಿಸಿ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ Upload ಮಾಡುವುದು.**

(ಹೆಚ್.ಎನ್. ಗೋಪಾಲಕೃಷ್ಣ)
ನಿರ್ದೇಶಕರು (ಪರೀಕ್ಷೆಗಳು)

ಪ್ರತಿಯನ್ನು:–
1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ವಿಭಾಗೀಯ ಸಹನಿರ್ದೇಶಕರು, ಸಾ.ಶಿ.ಇಲಾಖೆ, ಬೆಂಗಳೂರು, ಮೈಸೂರು, ಬೆಳಗಾಂ ಮತ್ತು ಕಲಬುರಗಿ ರವರಿಗೆ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಜಿಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ, ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ನೋಡಲ್ ಅಧಿಕಾರಿಗಳಿಗೆ, ಸೂಕ್ತ ಕ್ರಮಕ್ಕಾಗಿ.
5. ಹಿರಿಯ ಸಹಾಯಕ ನಿರ್ದೇಶಕರು (ವಾಣಿಜ್ಯ ಪರೀಕ್ಷೆಗಳು) ಆಯುಕ್ತರ ಕಛೇರಿ, ಬೆಂಗಳೂರು, ವಿಭಾಗೀಯ ಆಯುಕ್ತರ ಕಛೇರಿ, ಧಾರವಾಡ, ಕಲಬುರಗಿ ರವರಿಗೆ ಸೂಕ್ತ ಕ್ರಮಕ್ಕಾಗಿ.
6. ಶಾಖಾಧಿಕಾರಿಗಳು, ಗಣಕ ಶಾಖೆ.
7. ಕಛೇರಿ ಪ್ರತಿ.

KARNATAKA SCHOOL EXAMINATION AND ASSESSMENT BOARD
6th Cross, Malleshwaram, Bengaluru – 560 003

## FLOW CHART FOR UPLOADING RR COPY FOR COMMERCE EXAMINATION

www.sslc.karnataka.gov.in

↓

Login

↓

Other Exams Portal

↓

Commerce Examination

↓

Enter User ID

↓

Enter Password

↓

Login

↓

Upload RR Copy

↓

You will get message to your registered mobile number

| Please wait for RR copy approval by Division JD for further steps. This process may take 48 hours |
|---|

↓

If RR copy is approved, you will get message as

| Your RR copy is approved by Division JD. Now you can Register candidates for Commerce Examination |
|---|

If RR Copy is rejected you will get message as

| Your RR copy is rejected by Division JD. Please contact Section Officer, Commerce Examination section. |
|---|

**NOTE:** For payment of School Code renewal fee Rs. 205/- , use the option Make Payment through online/ Challan which is generated in Login.

## KARNATAKA SCHOOL EXAMINATION AND ASSESSMENT BOARD
### 6th Cross, Malleshwaram, Bengaluru – 560 003

---

**FLOW CHART FOR FILLING APPLICATION- COMMERCE EXAM**

**www.sslc.karnataka.gov.in**

↓

Login

↓

Click on OTHER EXAMS PORTAL

↓

Click on Commerce Examination

↓

Enter user ID and Password

↓

Login

↓

Click on Commerce Exam Application

↓

Select the Exam

↓

Enter Qualified Exam Registered Registration Number

↓

Click on **View**

↓

Candidate's basic details will be Auto fetched
(For Non KSEEB and Diploma in Commercial Practice students Etc.....all fields should be entered)

↓

Select Category

↓

If candidate belongs to SC/ST enter RD number

↓

Select medium of Instruction

↓

Select Exam Name

↓

Fee Amount will be displayed

↓

Select Candidate Type(Regular,Private,Improvement)

↓

Select Batch (Only for Type writing junior & Senior Exam)

↓

Enter Aadhar card number

↓

Enter Candidate /Parent Mobile Number

↓

Upload the Candidate Photo (60-80kb in JPEG format)

↓

Upload the Candidate Signature (20-50kb in JPEG format)

↓

**Save and get Application number**

↓

**Click on Print**

- **Take a print copy of application for your reference.**
- **You can get Nominal Roll of your candidates by clicking on Nominal Roll.**